ಅಧ್ಯಕ್ಷರು:– ಅವರು ಬರಲಿ. ಅವರು ಬಂದರೆ ಹೇಳುತ್ತೇನೆ.

ವಿಷಯ : ಚಿಕ್ಕಮಗಳೂರಿನಲ್ಲಿ 8 ಗ್ರಾಮೀಣ ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾರಂಭ ಮಾಡದಿರುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕಿಗೆ 2013–14 ಸಾಲಿನಲ್ಲಿ ಎಂಟು ಗ್ರಾಮೀಣ ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದರೂ, ಕಾರ್ಯಾರಂಭ ಮಾಡದಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

ಅಧ್ಯಕ್ಷರು:– ಮಾನ್ಯ ಸಚಿವರು ಇಲ್ಲ. ಮಾನ್ಯ ರಮೇಶ್ ಕುಮಾರ್, ಇಲ್ಲ. ಶ್ರೀಮತಿ ಶಾರದಾ ಪೂರ್ಯ ನಾಯಕ.

1. ವಿಷಯ : ಶಿವಮೊಗ್ಗ ತಾಲ್ಲೂಕಿನ ಮಡಕಿಚೀಲೂರು ಗ್ರಾಮದ ಸರ್ವೆ ನಂ. 78, 79 ರಲ್ಲಿನ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಬಗರ್ ಹುಕುಂದಾರರಿಗೆ ಹಕ್ಕು ಪತ್ರಗಳನ್ನು ನೀಡುವ ಬಗ್ಗೆ.

ಶ್ರೀಮತಿ ಶಾರದಾ ಪೂರ್ಯ ನಾಯಕ (ಶಿವಮೊಗ್ಗ ಗ್ರಾಮೀಣ):– ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ತಾಲ್ಲೂಕಿನ ಮಡಕಿಚೀಲೂರು ಗ್ರಾಮದ ಸರ್ವೆ ನಂ. 78, 79 ರಲ್ಲಿನ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುವ ಬಗರ್ ಹುಕುಂದಾರರಿಗೆ ಹಕ್ಕು ಪತ್ರಗಳನ್ನು ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ತಾಲ್ಲೂಕಿನ ಮಡಕಚೀಲೂರು ಗ್ರಾಮದ ಸ.ನಂ. 78 ರಲ್ಲಿ 144–10 ಎಕರೆ/ಗುಂಟೆ ಸರ್ವೆ ನಂಬರ್ 79 ರಲ್ಲಿ 7–30 ಎಕರೆ ಭೂಮಿಯನ್ನು ಹರಮಘಟ್ಟ ಮೀಸಲು ಅರಣ್ಯ ಎಂದು ಸರ್ಕಾರ ಘೋಷಿಸಿರುತ್ತದೆ. ನಮೂನೆ 50–53 ರಲ್ಲಿ ಅರ್ಜಿಯನ್ನು